# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1354(1532) |
| ಸದಸ್ಯರ ಹೆಸರು | : | ಶ್ರೀರಮೇಶ್ ಬಾಬು (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 17.03.02026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

<table>
<tr><th>ಕ್ರಮ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಒಟ್ಟು ಬಂಡವಾಳ ಎಷ್ಟು; ಇದರಲ್ಲಿ ಸರ್ಕಾರದ ಪಾಲು ಎಷ್ಟು ಮತ್ತು ಸಾಲದ ರೂಪದಲ್ಲಿ ಇರುವ ಬಂಡವಾಳ ಎಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು)</td><td>KSIIDC ನಿಗಮದ ಒಟ್ಟು ಬಂಡವಾಳ ರೂ.694,70,60,000/- ಇದರಲ್ಲಿ ಸರ್ಕಾರದ ಪಾಲು ಶೇ.100ರಷ್ಟಿರುತ್ತದೆ ಹಾಗೂ ಬಂಡವಾಳ ರೂಪದಲ್ಲಿ ಯಾವುದೇ ಸಾಲ ಇರುವುದಿಲ್ಲ.</td></tr>
<tr><td>ಆ)</td><td>ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ಹೊಂದಿರುವ ಒಟ್ಟು ಆಸ್ತಿ ಎಷ್ಟು; ರಾಜ್ಯದ ಯಾವ ಯಾವ ಭಾಗದಲ್ಲಿ ನಿಗಮವು ತನ್ನ ಆಸ್ತಿಯನ್ನು ಹೊಂದಿರುತ್ತದೆ; ರಾಜ್ಯದ ಹೊರಗೆ ನಿಗಮವು ಆಸ್ತಿಯನ್ನು ಹೊಂದಿದೆಯೇ; ಇದರ ಪ್ರಸ್ತುತ ಮಾರುಕಟ್ಟೆ ಮೌಲ್ಯದ ಸಹಿತವಾಗಿ ಇವುಗಳ ಪೂರ್ಣ ವಿವರಗಳನ್ನು ಒದಗಿಸುವುದು;</td><td>KSIIDCಯು ಬೆಂಗಳೂರಿನ ದೇವನಹಳ್ಳಿ, ನಂದಿನಿ ಲೇಔಟ್, ಪೀಣ್ಯ; ಧಾರವಾಡ; ಕಲಬುರ್ಗಿ; ಹಾಗೂ ಹುಬ್ಬಳ್ಳಿಯಲ್ಲಿ ಆಸ್ತಿ ಹೊಂದಿದ್ದು, ರಾಜ್ಯದ ಹೊರಗೆ ಯಾವುದೇ ಆಸ್ತಿ ಹೊಂದಿರುವುದಿಲ್ಲ. ಆಸ್ತಿಗಳ ವಿವರ:<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ವಿವರ</th><th>ಪುಸ್ತಕ ಮೌಲ್ಯ</th><th>ಮಾರುಕಟ್ಟೆ ಮೌಲ್ಯ</th></tr>
<tr><td>1</td><td>ಧಾರವಾಡದ ರಾಯಪುರದಲ್ಲಿ 1 ಎಕರೆ 10 ಗುಂಟೆ ಭೂಮಿ</td><td>1. 78</td><td rowspan="7">ಪ್ರಸ್ತುತ ಮರುಕಟ್ಟೆ ಮೌಲ್ಯವನ್ನು ಮೌಲ್ಯೀಕರಿಸಿರುವುದಿಲ್ಲ</td></tr>
<tr><td>2</td><td>BIALಗೆ ಗುತ್ತಿಗೆ ಆಧಾರದ ಮೇಲೆ ನೀಡಿದ ಭೂಮಿ 4,008 ಎಕರೆ – ದೇವನಹಳ್ಳಿ, ಬೆಂಗಳೂರು</td><td>28,702.06</td></tr>
<tr><td>3</td><td>KSIIDCಯೊಂದಿಗೆ ಉಳಿಸಿಕೊಂಡಿರುವ ಭೂಮಿ 407 ಎಕರೆ – ದೇವನಹಳ್ಳಿ, ಬೆಂಗಳೂರು</td><td>2,588.50</td></tr>
<tr><td>4</td><td>ಬೆಂಗಳೂರಿನ ಪೀಣ್ಯದಲ್ಲಿ 2,000 ಚದರ ಅಡಿ – ಕೈಗಾರಿಕ ಶೆಡ್</td><td>154.12</td></tr>
<tr><td>5</td><td>12 ವಸತಿಗೃಹಗಳು – ನಂದಿನಿ ಲೇಔಟ್, ಬೆಂಗಳೂರು</td><td>8.91</td></tr>
<tr><td>6</td><td>ಮಂಗಳೂರಿನ ಕೊಡ್ಯಲ್‌ಬೈಲ್‌ನಲ್ಲಿ – 2815 ಚದರ ಅಡಿ ವಲಯ ಕಛೇರಿ ಕಟ್ಟಡ</td><td>10.77</td></tr>
<tr><td>7</td><td>ಕಲಬುರ್ಗಿಯ ಸ್ಟೇಷನ್ ರಸ್ತೆಯಲ್ಲಿ – 2080 ಚದರ ಅಡಿ ವಲಯ ಕಛೇರಿ ಕಟ್ಟಡ</td><td>22.,89</td></tr>
</table></td></tr>
</table>

| | | | |
|---|---|---|---|
| 8 | ಖನಿಜ ಭವನ, ಬೆಂಗಳೂರು (ಗುತ್ತಿಗೆ ಆಧಾರ) – 3 ಎಕರೆ 02 ಗುಂಟೆ | 271.39 | |
| 9 | ITBT Park ರಾಜಾಜಿನಗರ, ಬೆಂಗಳೂರು (ಗುತ್ತಿಗೆ ಆಧಾರ) – 1 ಎಕರೆ 06 ಗುಂಟೆ | 1,039.84 | |
| 10 | ಷೇರು ಮತ್ತು ಉದ್ಯಮಗಳ ಹೂಡಿಕೆ | 12,426.37 | 1,19,396.43 |

| | | |
|---|---|---|
| ಇ) | ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಮಗದಡಿಯಲ್ಲಿ ರಾಜ್ಯದಲ್ಲಿ ಎಷ್ಟು ಸ್ಥಳೀಯ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೊಂದಲಾಗಿದೆ; ಉದ್ದೇಶಿತ ವಿಮಾನ ನಿಲ್ದಾಣಗಳು ಎಷ್ಟು; ಪಿಪಿಪಿ ಆಧಾರದ ಮೇಲೆ ಗೊಂದಲವಾಗಿರುವ ವಿಮಾನ ನಿಲ್ದಾಣಗಳು ಎಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು) | ರಾಜ್ಯ ಸರ್ಕಾರದ ಆದೇಶಗಳನ್ವಯ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾರ್ಯವನ್ನು KSIIDCಯು ಕೈಗೊಂಡಿವೆ. KSIIDC ನಿಗಮದಡಿಯಲ್ಲಿ ಎರಡು ಸ್ಥಳೀಯ ವಿಮಾನ ನಿಲ್ದಾಣಗಳ ಕಾರ್ಯಗಳನ್ನು ನಿರ್ವಹಿಸುತ್ತಿದೆ.<br>1. ಬೀದರ್ ವಿಮಾನ ನಿಲ್ದಾಣ (ರಕ್ಷಣಾ – ದೇಶೀಯ)<br>2. ಶಿವಮೊಗ್ಗ ವಿಮಾನ ನಿಲ್ದಾಣ (ದೇಶೀಯ)<br>ರಾಜ್ಯ ಸರ್ಕಾರವು ಈ ಕೆಳಗಿನ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತದೆ.<br>1. ವಿಜಯಪುರ ವಿಮಾನ ನಿಲ್ದಾಣ<br>2. ಹಾಸನ ವಿಮಾನ ನಿಲ್ದಾಣ<br>3. ರಾಯಚೂರು ವಿಮಾನ ನಿಲ್ದಾಣ<br>4. ಬಳ್ಳಾರಿ ವಿಮಾನ ನಿಲ್ದಾಣ<br>5. ಕಾರವಾರ ವಿಮಾನ ನಿಲ್ದಾಣ (ರಕ್ಷಣಾ)<br>6. 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು.<br>ಪಿಪಿಪಿ ಆಧಾರದ ಮೇಲೆ ಗೊಂದಲವಾಗಿರುವ ವಿಮಾನ ನಿಲ್ದಾಣಗಳು ಯಾವುದೂ ಇರುವುದಿಲ್ಲ. |
| ಈ) | ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಡಿಯಲ್ಲಿ ರಾಜ್ಯವು ಹೊಂದಿರುವ ಬಂದರುಗಳು ಎಷ್ಟು; ಇವುಗಳಲ್ಲಿ ಪಿಪಿಪಿ ಅಡಿಯಲ್ಲಿ ಇರುವ ಬಂದರುಗಳು ಎಷ್ಟು? (ಪೂರ್ಣ ವಿವರಗಳನ್ನು ಒದಗಿಸುವುದು) | ಪ್ರಸ್ತುತ, KSIIDC ವತಿಯಿಂದ ರಾಜ್ಯದ ಯಾವುದೇ ಬಂದರಿನ ಯೋಜನೆಯನ್ನು ನಿರ್ವಹಿಸುತ್ತಿಲ್ಲ. |
| ಉ) | ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮವು ಖಾಸಗಿ ಜೊತೆಯಲ್ಲಿ ಎಷ್ಟು ಜಂಟಿ ಉದ್ಯಮಗಳನ್ನು ಹೊಂದಿರುತ್ತದೆ? ಈ ಜಂಟಿ ಉದ್ಯಮಗಳಲ್ಲಿ ನಿಗಮಕ್ಕೆ ಬಂದಿರುವ ನಿಗಮವು ಮಾಡಿರುವ ಹೂಡಿಕೆ ಎಷ್ಟು? ಖಾಸಗಿ ಹೂಡಿಕೆ ಎಷ್ಟು? ಜಂಟಿ ಉದ್ಯಮಗಳಲ್ಲಿ ನಿಗಮಕ್ಕೆ ಬರುತ್ತಿರುವ ವಾರ್ಷಿಕ ಲಾಭವೆಷ್ಟು? (ಪೂರ್ಣ ವಿವರಗಳನ್ನು ಒದಗಿಸುವುದು) | KSIIDCಯು M/S. IL&FS ಜೊತೆ ಸೇರಿ ಸಲಹಾ ಮತ್ತು ಸಮಾಲೋಚನಾ ಸೇವೆಗಳನ್ನು ಒದಗಿಸಲು "KSIIDC IL&FS Project Development Company Limited" ಎಂಬ ಜಂಟಿ ಉದ್ಯಮವನ್ನು ಸ್ಥಾಪಿಸಿದೆ. ಇದರ ಒಟ್ಟು ಬಂಡವಾಳ ರೂ.5 ಲಕ್ಷಗಳಿದ್ದು, ನಿಗಮದ ಪಾಲು ಶೇ.50%ರಷ್ಟು ಇರುತ್ತದೆ. ಈ ಕಂಪನಿ ನಷ್ಟದಲ್ಲಿದ್ದು, ಅದನ್ನು ಮುಚ್ಚುವ ಪ್ರಕ್ರಿಯೆಯಲ್ಲಿದೆ. |